ದಿನಾಂಕಃ 24.02.2026 ರಂದು ಡಿ.ಡಬ್ಲ್ಯೂ-6 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಅವರು ತಮ್ಮ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅವರ ಮುಖ್ಯ ವಿಚಾರಣೆಯಾಗಿ ಪರಿಗಣಿಸಲು ಕೋರಿದ್ದು ಅವರ ಕೋರಿಕೆಯನ್ನು ಮನ್ನಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ / ಪ್ರತಿವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದಲ್ಲಿರುವ ಅಂಶಗಳನ್ನು ಸತ್ಯವಾಗಿರುತ್ತದೆ, ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಸಾಕ್ಷ ನಿಡಿ-4 ರಲ್ಲಿ ತನ್ನ ಸಹಿ ನೋಡಿ ಗುರ್ತಿಸಿಕೊಂಡಿದ್ದು ಅದನ್ನು ನಿಡಿ-4(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿಪಿಯು ವಕೀಲರಿಂದಃ**

1. ನಿಡಿ-4 ನ್ನು ತಯಾರಿಸುವ ಮೊದಲು 1ನೇ ಪ್ರತಿವಾದಿ ಅವರ ಗಂಡ ಕುಮಾರ ರವರ ವಿರುದ್ಧ ಜೀವನಾಂಶಕ್ಕಾಗಿ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ನಾನು 1ನೇ ಪ್ರತಿವಾದಿ ಪರ ವಕೀಲರಾಗಿದ್ದೇನು ಎಂದರೆ ಸರಿ. ನಿಡಿ-4 ನ್ನು ತಯಾರಿಸುವ ಮೊದಲು ದಾಖಲಾತಿಗಳನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಡಿಡಬ್ಲ್ಯು -2 ಧನಂಜಯ. ಈರಮ್ಮ ರವರ ಪರವಾಗಿ ವಕಾಲತ್ ಹಾಕಿದ್ದೀರಾ ಎಂದರೆ ಇಲ್ಲ. ಈರಮ್ಮ ಗೆ ಸಂಬಂಧಪಟ್ಟ ಯಾವುದಾದರೂ ದಾಖಲಾತಿಯನ್ನು ತಯಾರಿಸಿದ್ದೀರಾ ಎಂದರೆ ನಿಡಿ-4ನ್ನು ಹೊರತುಪಡಿಸಿ ಯಾವುದನ್ನು ಮಾಡಿರುವುದಿಲ್ಲ. ಸದರಿ ಧನಂಜಯರವರ ಪರವಾಗಿ ವಕಾಲತ್ ಹಾಕಿದ್ದೀರಾ ಎಂದರೆ ಒಂದು ಹಲ್ಲೆಯ ಪ್ರಕರಣದಲ್ಲಿ ಹಾಕಿರುತ್ತೇನೆ. ದಾಖಲಾತಿಗಳನ್ನು ಧನಂಜಯರವರ ಮುಖಾಂತರ 1ನೇ ಪ್ರತಿವಾದಿ ಕಳುಹಿಸಿರುತ್ತಾರಾ ಎಂದರೆ ಈರಮ್ಮ ಮತ್ತು ಧನಂಜಯರವರ ಜೊತೆ ಕಳುಹಿಸಿಕೊಟ್ಟಿರುತ್ತೇನೆ ಎಂದು 1ನೇ ಪ್ರತಿವಾದಿ ತಿಳಿಸಿರುತ್ತಾರೆ. ನಿಡಿ-4 ನ್ನು ಈರಮ್ಮ ರವರು ಕಛೇರಿಗೆ ಬಂದ ನಂತರ ತಯಾರಿಸಿರುತ್ತೇನೆ. 1ನೇ ಪ್ರತಿವಾದಿಯು ವಿಲ್ ನ್ನು ತಯಾರಿಸಲು ಈರಮ್ಮ ಮತ್ತು ಧನಂಜಯರವರನ್ನು ನನ್ನ ಕಛೇರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ನೊಂದಣಿ ಕಛೇರಿಗೆ ಈರಮ್ಮ ಒಬ್ಬರೇ ಬಂದಿರುತ್ತಾರಾ ಎಂದರೆ ಅವರೊಂದಿಗೆ

ಧನಂಜಯ ಮತ್ತು ಪಾಸಿಲ್ ಬಂದಿರುತ್ತಾರೆ. ನೊಂದಣಿ ಕಛೇರಿಗೆ 1ನೇ ಪ್ರತಿವಾದಿ ಬಂದಿರುತ್ತಾರಾ ಎಂದರೆ ಇಲ್ಲ. 1ನೇ ಪ್ರತಿವಾದಿ ಹೇಳಿಕೆಯ ಮೇರೆಗೆ ನಿಡಿ-4 ನ್ನು ತಯಾರಿಸಿರುತ್ತೇನೆ ಎಂದರೆ ಅವರ ಹೇಳಿಕೆಯ ಮೇರೆಗೆ ತಯಾರಿಸಿರುವುದಿಲ್ಲ ಈರಮ್ಮ ರವರು ನಮ್ಮ ಕಛೇರಿಗೆ ಕಳುಹಿಸಿರುತ್ತಾರೆ. ನಿಡಿ-4 ನ್ನು ತಯಾರಿಸುವ ಮೊದಲು ಈರಮ್ಮರವರು ಬೇರೆ ದಾಖಲಾತಿ ಮಾಡಿರುವ ಬಗ್ಗೆ ಮಾಹಿತಿ ನೀಡಿರುತ್ತಾರಾ ಎಂದರೆ ಇಲ್ಲ.

2. ದಿಃ 17.10.2001 ರಂದು ನಿಡಿ-2 ರ ಪ್ರಕಾರ ವಾದಿಗೆ ಈರಮ್ಮರವರು ವಿಲ್ ಮಾಡಿರುವುದಾಗಿ ಅದನ್ನು ರದ್ದುಪಡಿಸಿರುವುದಾಗಿ ತಿಳಿಸಿರುತ್ತಾರಾ ಎಂದರೆ ಇಲ್ಲ. ನಿಡಿ-4 ನ್ನು ತಯಾರಿಸುವಾಗ ಈರಮ್ಮ ರವರ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಇಲ್ಲ ಆದರೆ ಅವರು ಹೇಳಿದ ರೀತಿ ನಿಡಿ-4 ನ್ನು ಬರೆದಿರುತ್ತೇನೆ.

3. ನಿಡಿ-4 ಮರಣ ಶಾಸನ ಪತ್ರವೆಂದು ಈರಮ್ಮರವರಿಗೆ ತಿಳಿವಳಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನ ತಯಾರಿಸುತ್ತಿದ್ದೇನೆ ಎಂದು ನಾನು ಈರಮ್ಮರವರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಈರಮ್ಮರವರು ಮರಣ ಶಾಸನ ಪತ್ರವನ್ನು 1ನೇ ಪ್ರತಿವಾದಿ ಪರವಾಗಿ ಮಾಡಲು ನನಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ಧನಂಜಯರವರೊಂದಿಗೆ ಸೇರಿ ನಿಡಿ-4 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈರಮ್ಮರವರು 1ನೇ ಪ್ರತಿವಾದಿಯೊಂದಿಗೆ ವಾಸವಿರಲಿಲ್ಲ ಮತ್ತು ನಿಡಿ-4 ರಲ್ಲಿರುವ ಅಂಶಗಳು ಸುಳ್ಳು ಅಂಶಗಳಾಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.) ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,

ಮತ್ತು ಜೆಎಂಎಫ್ ಸಿ, ಆಲೂರು.